

# ಸೋನಲ್ ಸುಂದರ ಕನಸು

ಭಿನ್ನ ಬಗೆಯ ಪಾತ್ರಗಳಲ್ಲಿ ಕಾಣಿಸಿಕೊಳ್ಳಬೇಕು. ಪಾತ್ರಗಳ ಮೂಲಕವೇ ಜನರು ತಮ್ಮನ್ನು ಗುರ್ತಿಸುವಂತಾಗಬೇಕು ಎಂಬ ಕನಸು ಹೊತ್ತು ಚಿತ್ರರಂಗದಲ್ಲಿ ನಡೆಯುತ್ತಿರುವ ನಟಿ ಸೋನಲ್ ಮೊಂತೆರಿಯೊ. ಕನಸಿನ ದಾರಿಯಲ್ಲಿಯೇ ನಡೆಯುತ್ತಿರುವ ಖುಷಿ ಅವರದ್ದು.

■ ಪದ್ಮನಾಭ ಭಟ್

‘ಒಂದು ಸಿನಿಮಾ ತಂಡ ಎಂದರೆ ಅದು ಕುಟುಂಬ ಇದ್ದ ಹಾಗೆಯೇ. ನಾವು ನಮ್ಮ ಮನೆಯವರ ಜೊತೆಗೆ ಕಳೆಯುವುದಕ್ಕಿಂತ ಹೆಚ್ಚಿನ ಸಮಯವನ್ನು ಅಲ್ಲಿಯೇ ಕಳೆಯುತ್ತೇವೆ. ಹಾಗಾಗಿ ಆ ತಂಡವನ್ನು ಆಯ್ಕೆ ಮಾಡಿಕೊಳ್ಳಬೇಕಾದರೆ ಸಾಕಷ್ಟು ಜಾಗರೂಕರಾಗಿರಬೇಕು.’ ಹೀಗೆನ್ನುವಾಗ ಸೋನಲ್ ಮೊಂತೆರಿಯೊ ಅವರ ಧ್ವನಿಯಲ್ಲಿ ಖುಷಿಯ ಜೊತೆಗೆ ಎಚ್ಚರಿಕೆಯೂ ಎದ್ದು ಕಾಣುತ್ತಿತ್ತು.

ಮಂಗಳೂರಿನ ಈ ಬೆಡಗಿ ಚಂದನವನಕ್ಕೆ ಕಾಲಿಟ್ಟಿದ್ದು ತುಳು ಚಿತ್ರರಂಗದಲ್ಲಿ ಸೂಪರ್ ಹಿಟ್ ಸಿನಿಮಾಗಳ ಕಿರೀಟವನ್ನು ಹೊತ್ತುಕೊಂಡೇ. ಆದರೆ ಇಲ್ಲಿ ಅಷ್ಟು ಸುಲಭಕ್ಕೆ ‘ಗುರುತಿನ ಚೀಟಿ’ ಸಿಗಲಿಲ್ಲ.

‘ಯೋಗರಾಜ ಭಟ್ಟರ ‘ಪಂಚತಂತ್ರ’ ಸಿನಿಮಾದಲ್ಲಿ ನಟಿಸುವುದಕ್ಕೂ ಮೊದಲೂ ನಾನು ಕೆಲವು ಸಿನಿಮಾಗಳಲ್ಲಿ ನಟಿಸಿದ್ದೆ. ಆದರೆ ಅವ್ಯಾವುದೂ ನನಗೆ ಹೆಚ್ಚಿನ ಹೆಸರು ತಂದುಕೊಡಲಿಲ್ಲ. ನಾನು ಯಾರೆಂದೇ ಗೊತ್ತಿರಲಿಲ್ಲ. ಆದರೆ ಪಂಚತಂತ್ರದ ನಂತರ ನನ್ನ ವೃತ್ತಿಜೀವನದ ದೆಸೆಯೇ ಬದಲಾಯಿತು. ಜನ ಗುರ್ತಿಸಲಾರಂಭಿಸಿದರು. ಸಾಕಷ್ಟು ಅವಕಾಶಗಳೂ ಬಂದವು. ನಂತರ ದರ್ಶನ್ ಅಭಿನಯದ ‘ರಾಬರ್ಟ್’ ಸಿನಿಮಾದಲ್ಲಿ ನಟಿಸಿದ ಸಣ್ಣ ಪಾತ್ರವೂ ಸಾಕಷ್ಟು ಜನಪ್ರಿಯತೆ ಕೊಟ್ಟಿತು. ಜನರು ನರ್ಸಮ್ಮ ಎಂದೇ ಗುರ್ತಿಸಲು ಆರಂಭಿಸಿದರು. ಈಗ ನಾನು ಒಪ್ಪಿಕೊಂಡಿರುವ, ಬಿಡುಗಡೆಯಾಗಲಿರುವ ಸಿನಿಮಾಗಳಲ್ಲಿನ ಪಾತ್ರಗಳೂ ಅಷ್ಟೇ ಪ್ರಭಾವಿಯಾಗಿವೆ. ಒಂದೊಂದು ಪಾತ್ರವೂ ಜನರು ನನ್ನನ್ನು ಪ್ರೀತಿಯಿಂದ ಕರೆಯುವ ನಿಕ್ ನೇಮನ್ನು ಬದಲಿಸುತ್ತಲೇ ಹೋಗುವಷ್ಟು ಶಕ್ತವಾಗಿವೆ’ ಎಂದು ಖುಷಿಯಿಂದಲೇ ಹೇಳಿಕೊಳ್ಳುತ್ತಾರೆ ಅವರು.

ನಟಿಯಾಗಿ ಒಂದೇ ರೀತಿಯ ಪಾತ್ರಕ್ಕೆ ಅಂಟಿಕೊಳ್ಳುವುದಕ್ಕಿಂತ, ಒಂದಕ್ಕಿಂತ ಒಂದು ಭಿನ್ನವಾದ ಮತ್ತು ಸವಾಲಿನ ಪಾತ್ರಗಳಲ್ಲಿ ಕಾಣಿಸಿಕೊಳ್ಳುವುದೇ ತಮ್ಮ ವೃತ್ತಿಜೀವನದ ಆರೋಗ್ಯಕ್ಕೆ ಹೆಚ್ಚು ಪೂರಕ ಎಂಬ ಅರಿವು ಅವರಿಗಿದೆ.

ಅಂದಹಾಗೆ ಸೋನಲ್ ಕೈಲೀಗ ಸಾಕಷ್ಟು ಅವಕಾಶಗಳಿವೆ. ಜಯತೀರ್ಥ ನಿರ್ದೇಶನದ ‘ಬನಾರಸ್’ ಚಿತ್ರದಲ್ಲಿ ಪಕ್ಕದ್ಮನೆ ಹುಡುಗಿಯಷ್ಟು ಆಪ್ತವಾಗಿ ಕಾಣಿಸಿಕೊಳ್ಳುತ್ತಿರುವ ಹಾಗೆಯೇ ಡಾರ್ಲಿಂಗ್ ಕೃಷ್ಣ ಅವರ ಜೊತೆಗೆ ನಟಿಸುತ್ತಿರುವ ‘ಶುಗರ್ ಫ್ಯಾಕ್ಟರಿ’ಯಲ್ಲಿ ಪಡ್ಡೆಗಳ ಎದೆಯಲ್ಲಿ